

ಚಿತ್ರ: ಮಂಜುನಾಥ ಹುಲಕೊಪ್ಪದ



# ಬೆಕ್ಕಿಗೆ ಗಂಟೆ ಕಟ್ಟುವ ಮತ್ತೊಂದು ಪ್ರಯತ್ನ

■ **ಸೋಮನಾಥ ಎಸ್. ಕರ್ಕೇರ**

ಮನೆಯ ಮೂಲೆಯಲ್ಲಿ ಬೆಕ್ಕು ಸುಖ ನಿದ್ರೆಯಲ್ಲಿದ್ದು ಇನ್ನು ಎರಡು ತಾಸಿನ ತನಕ ಅದಕ್ಕೆ ಎಚ್ಚರವಾಗುವುದಿಲ್ಲ ಎಂದು ಖಾತ್ರಿಮಾಡಿಕೊಂಡ ಇಲಿಗಳೆಲ್ಲಾ ಅಟ್ಟದ ಮೇಲೆ ಸಭೆ ಸೇರಿದ್ದವು. ಸಭೆಯ ಉದ್ದೇಶ: ಇಲಿಗಳ ಸಂತಾನವನ್ನು ನಿರ್ನಾಮ ಮಾಡಲು ಪಣತೊಟ್ಟಿರುವ ಬೆಕ್ಕಿನ ಕೊರಳಿಗೆ ಘಂಟೆ ಕಟ್ಟುವ ಮತ್ತೊಂದು ಪ್ರಯತ್ನ ಮಾಡುವುದಾಗಿತ್ತು.

ಸಭೆಯ ಅಧ್ಯಕ್ಷತೆ ವಹಿಸಲಿದ್ದ ಮುದಿ ಇಲಿ ಆಗಮಿಸುತ್ತಿದ್ದಂತೆಯೇ ಆ ತನಕ ತಮ್ಮ ತಮ್ಮೊಳಗೆ ಪಿಸುಗುಟ್ಟುತ್ತಿದ್ದ ಇಲಿಗಳೆಲ್ಲಾ ಸುಮ್ಮನಾದವು. ಸರ್ವರಿಗೂ ನಮಸ್ಕರಿಸಿ ಅಧ್ಯಕ್ಷ ಸ್ಥಾನವನ್ನು ಅಲಂಕರಿಸಿ ಮುದಿ ಇಲಿ, 'ಬಂಧುಗಳೇ, ನಮ್ಮ ಆಜನ್ಮ ವೈರಿ ಬೆಕ್ಕು ನಿತ್ಯವೂ ಆಕ್ರಮಣ ಮಾಡಿ ನಮ್ಮ ಸಂತತಿಯನ್ನೇ ನಿರ್ನಾಮ ಮಾಡಲು ಹೊರಟಿದೆ. ಬೆಕ್ಕಿನ ಈ ದಬ್ಬಾಳಿಕೆ ಇದೇ ರೀತಿ ಮುಂದುವರಿದರೆ ಈ ಭೂಮಿಯಿಂದ ನಮ್ಮ ಸಂತಾನ ಅಳಿಸಿ ಹೋಗುವುದು ಖಂಡಿತ. ಹಾಗಾಗಿ ಬೆಕ್ಕು ನಮ್ಮತ್ತ ಬರುವ ಸುಳಿವನ್ನು ಮುಂಚಿತವಾಗಿ ತಿಳಿದುಕೊಂಡು ನಮ್ಮ ಪ್ರಾಣ ರಕ್ಷಣೆ ಮಾಡಿಕೊಳ್ಳುವ ಸಲುವಾಗಿ ನಾವು ಬೆಕ್ಕಿನ ಕೊರಳಿಗೆ ಘಂಟೆ ಕಟ್ಟುವುದು ಅಗತ್ಯವಾಗಿದೆ. ಹಲವು ವರ್ಷಗಳ ಹಿಂದೆ ನಮ್ಮ ಹಿರಿಯರು ಇಂತಹ ಪ್ರಯತ್ನವೊಂದನ್ನು ಮಾಡಿದ್ದು ಅದರಲ್ಲಿ ಅವರು ಸೋಲನ್ನುಂಡ ಸಂಗತಿ ನಿಮಗೆಲ್ಲಾ ತಿಳಿದಿದೆ. ನಮ್ಮ ಹಿರಿಯರಲ್ಲಿ ಅಂತಹ ಧೈರ್ಯ ಇರಲಿಲ್ಲ. ಹಾಗಾಗಿ ಅವರು ಬೆಕ್ಕಿಗೆ ಘಂಟೆ ಕಟ್ಟುವ ಪ್ರಯತ್ನದಲ್ಲಿ ಸೋತಿದ್ದರು. ಆದರೆ ಈಗ ನಮ್ಮ ನಡುವೆ ಯಾವ ಕಠಿಣ ಕಾರ್ಯವನ್ನೂ ಸಲೀಸಾಗಿ ಮಾಡಬಲ್ಲ ಉತ್ಸಾಹಿ ಯುವಕರಿದ್ದಾರೆ. ಹಾಗಾಗಿ ನಾವೆಲ್ಲಾ ಕೂಡಿ ಬೆಕ್ಕಿನ ಕೊರಳಿಗೆ ಘಂಟೆ ಕಟ್ಟುವ ಇನ್ನೊಂದು ಪ್ರಯತ್ನವನ್ನು ಮಾಡಲೇಬೇಕು, ದೃಢ ಮನಸ್ಸೊಂದಿದ್ದರೆ ಯಾವ ಕೆಲಸವೂ ಅಸಾಧ್ಯವಲ್ಲ. ಆದ್ದರಿಂದ ಬಂಧುಗಳೇ, ಏಳಿ, ಎದ್ದೇಳಿ, ಬೆಕ್ಕಿನ ಕೊರಳಿಗೆ ಘಂಟೆ ಕಟ್ಟುವ ತನಕ ವಿರಮಿಸಬೇಡಿ. ಬೆಕ್ಕಿನ ಕೊರಳಿಗೆ ಕಟ್ಟಬೇಕಾದ ಗಂಟೆಯನ್ನು ಜನತಾ ಬಜಾರ್‌ನಿಂದ ಖರೀದಿಸಿ ತಂದಿದ್ದೇನೆ' ಎಂದು ಮೇಜಿನ ಮೇಲಿದ್ದ ಗಂಟೆಯನ್ನು ಎತ್ತಿ ಎಲ್ಲರಿಗೂ ತೋರಿಸಿತು.

ಈ ಘಂಟೆಯನ್ನು ಯಾರು ಕಟ್ಟಬೇಕೆಂದು ತಿಳಿಸುವ ಕೃಪೆ ಮಾಡುವಿರಾ? ಸಭೆಯ ನಡುವೆ ಕುಳಿತ ಇಲಿಯೊಂದು ಎದ್ದು ನಿಂತು ಕ್ಷೀಣ ಸ್ವರದಲ್ಲಿ ಅಧ್ಯಕ್ಷರನ್ನು ವಿಚಾರಿಸಿತು. ಅದಕ್ಕೆ ಉತ್ತರವಾಗಿ, 'ಹೌದು. ಇದೇ ನಮ್ಮ ಮುಂದಿರುವ ಯಕ್ಷ ಪ್ರಶ್ನೆ. ನಿಜ ಹೇಳಬೇಕೆಂದರೆ ನಿಮ್ಮೆಲ್ಲರ ಪೈಕಿ ಅತ್ಯಂತ ಹಿರಿಯನಾಗಿರುವ ನಾನೇ ಸ್ವತಃ ಘಂಟೆ ಕಟ್ಟಬೇಕೆಂದಿದ್ದೆ. ಆದರೆ ಏನು ಮಾಡಲಿ? ನಾನು ಮುದುಕ. ಒಂದು ಹೆಜ್ಜೆ ಮುಂದಿಡುವುದಕ್ಕೂ ನನ್ನ ದೇಹದಲ್ಲಿ ತ್ರಾಣವಿಲ್ಲ. ಹಾಗಾಗಿ ಈ ಕೆಲಸಕ್ಕೆ ನಮ್ಮಲ್ಲಿರುವ ತರುಣರು ಮುಂದೆ ಬರಬೇಕು' ಎಂದು ಮುದಿ ಇಲಿ ಉಲಿಯಿತು. ಇದನ್ನು ಕಂಡು ಎಲ್ಲ ಇಲಿಗಳೂ ದಷ್ಟಪುಷ್ಟವಾಗಿ ಬೆಳೆದ ತರುಣ ಇಲಿಯೊಂದರತ್ತ ನೋಡತೊಡಗಿದವು. ಎಲ್ಲರೂ ತನ್ನನ್ನೇ ಈ ಕಠಿಣ ಕಾರ್ಯಕ್ಕೆ ನೇಮಿಸಲಿದ್ದಾರೆಂದು ತಿಳಿದು ಭಯಗೊಂಡ ಆ ತರುಣ ಇಲಿ ಎದ್ದು ನಿಂತು ನುಡಿಯಿತು. 'ಹೌದು ಇಲ್ಲಿ ನೆರೆದವರ ಪೈಕಿ ನಾನು ತರುಣನೇ ಸರಿ. ಅಲ್ಲದೆ ಈ ಕೆಲಸವನ್ನು ನಾನು ಸಂತೋಷದಿಂದ ಮಾಡುತ್ತಿದ್ದೆ. ಆದರೆ ಕಳೆದ ಕೆಲವು ದಿನಗಳಿಂದ ನನಗೆ ಮೈಯಲ್ಲಿ ಹುಷಾರಿಲ್ಲ. ಒಂದೆರಡು ತಿಂಗಳು ಹೆಚ್ಚು ಓಡಾಡಬಾರದೆಂದೂ, ಹೆಚ್ಚು ಭಾರದ ವಸ್ತುಗಳನ್ನು ಎತ್ತಬಾರದೆಂದೂ ನನ್ನ ತಪಾಸಣೆ ಮಾಡಿದ ನನ್ನ ಫ್ಯಾಮಿಲಿ ಡಾಕ್ಟರರು ನನಗೆ ಸಲಹೆ ನೀಡಿದ್ದಾರೆ. ಹಾಗಾಗಿ ನಾನು ಈ ಕೆಲಸವನ್ನು ಮಾಡುವಂತಿಲ್ಲ. ದಯವಿಟ್ಟು ಕ್ಷಮಿಸಿ' ಎಂದು ಎಲ್ಲರನ್ನೂ ನಿರಾಸೆಗೊಳಿಸಿತು.

'ನಾನು ಈ ಕೆಲಸವನ್ನು ಖಂಡಿತ ಮಾಡುತ್ತಿದ್ದೆ, ಆದರೆ ನಾನು ಇಷ್ಟು ಚಿಕ್ಕವನೆಂದರೆ ಈ ಘಂಟೆಯನ್ನು ಎತ್ತುವುದು ಕೂಡಾ ನನ್ನಿಂದ ಸಾಧ್ಯವಿಲ್ಲ' ಎಂದು ಆ ತನಕ ಪೆಪ್ಪರ್‌ಮೆಂಟ್ ಚೀಪುತ್ತಾ ಕುಳಿತಿದ್ದ ಮರಿ ಇಲಿ ಎದ್ದು ನಿಂತು ಅಂದಾಗ ಸಭೆಯಲ್ಲಿ ನಗೆಯ ಅಲೆ ಎಬ್ಬಿತು.

'ಅಧ್ಯಕ್ಷರೇ, ಬೆಕ್ಕಿಗೆ ಘಂಟೆ ಕಟ್ಟುವುದು ನಮ್ಮ ಮುಂದಿರುವ

